Grant of Takavi Loans.

*Q.—301. Sri K. P. REVANNASIDDAPPA (Tiptur).—

Will the Government be pleased to state:—

(*a*) the total amount of takavi loan granted in Tiptur taluk for the last three years;

(*b*) the number of persons to whom such loans have been granted together with the amounts sanctioned to each?

A.—Sri M. V. KRISHNAPPA (Minister for Revenue).—

(*a*) Rs. 36,530.

(*b*) *Vide* statement appended.

STATEMENT.

Year	Number of Persons	Amount sanctioned to each
		Rs.
1962-63 ...	1	150
	2	175
	5	200
	5	250
	7	300
	2	350
	4	400
	4	500
	1	600
	1	750
	32	
1963-64 ...	1	150
	3	200
	35	250
	1	500
	40	
1964-65 ...	9	30
	4	40
	90	50
	1	60
	8	80
	20	100
	4	150
	5	200
	24	250
	2	400
	167	

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ನಮುದಾಯ ಅಭಿವೃದ್ಧಿಗೆ ಒಂದು ವರ್ಷಕ್ಕೆ ತಕಾವಿ ಲೋನು ಎಷ್ಟು ಕೊಡಬೇಕೆಂದು ಸರ್ಕಾರ ಯೋಚನೆ ಮಾಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೂರ್ವಕಾಲದಿಂದಲೂ ಜಿಲ್ಲೆಗೆ ಇಷ್ಟು, ಕಷ್ಟ ಕಾಲಕ್ಕೆ ಎಂದು ತಕಾವಿ ಲೋನನ್ನು ಕೊಡುತ್ತಾ ಬಂದಿವ್ವಾರೆ, ಚಿಕ್ಕ ರೈತರಿಗೆ ಕೊಡುವ ಉದ್ದೇಶದಿಂದ ಮಾಡಿದ್ದಾರೆ, ಅದು ಬಹಳ ಕಡಿಮೆ ಹಣ ಇರುತ್ತದೆ. ಈಗ ರಾಂಗ್ ಟರ್ಮ್ ಲೋನು, ಷಾರ್ಟ್ ಟರ್ಮ್ ಲೋನು ಎಂದು ಅನೇಕ ವಿಧವಾದ ಲೋನುಗಳನ್ನು ಬೇರೆ ಬೇರೆ ಇರಾಖೆಗಳ ಮುಖಾಂತರ ಕೊಡುತ್ತಾರೆ. ತಕಾವಿ ಲೋನನ್ನು ತುಮಕೂರು ಜಿಲ್ಲೆಗೆ 2 ಲಕ್ಷ 70 ಸಾವಿರ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದೇವೆ, ಅದರಲ್ಲಿ ತಮ್ಮ ತಾಲ್ಲೂಕಿಗೆ ನುಮಾರು 26-27 ಸಾವಿರ ರೂಪಾಯಿ ಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕ್ಷಾಮ ಕಾಲದಲ್ಲಿ ತಾವು ಕೊಟ್ಟಿರತಕ್ಕ ಹಣ ಬಹಳ ಕಡಿಮೆ.....

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ಷಾಮ ಕಾಲ ಅಂತಲೇ ಹಿಂದೆ 10-12 ಸಾವಿರ ರೂಪಾಯಿ ಕೊಡುತ್ತಾ ಇದ್ದುದನ್ನು ಈ ವರ್ಷ 29 ಸಾವಿರದ 900 ರೂಪಾಯಿಗಳು ಎಂದರೆ ಹತ್ತಿರ ಹತ್ತಿರ 30 ಸಾವಿರ ರೂಪಾಯಿಗಳಷ್ಟು ಕೊಟ್ಟಿದ್ದೇವೆ. ಮುಂದೆ ಇನ್ನೂ ಬೇಕಾದರೆ ಕೊಡುವುದಕ್ಕೆ ಅದನ್ನು ವಿಚಾರ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—1964-65ರಲ್ಲಿ 40, 50, 60 ರೂಪಾಯಿ ಒಬ್ಬೊಬ್ಬರಿಗೆ ಕೊಟ್ಟಿದ್ದೀರಲ್ಲಾ ಅವರು ನಿಮಗೆ ದಾಖಲೆ ಒದಗಿಸುವುದಕ್ಕೆ ಒಬ್ಬೊಬ್ಬರಿಗೆ ಏನು ಖರ್ಚಾಗುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಿಕ್ಕ ಸಾಲಕ್ಕೆ ಚಿಕ್ಕ ದಾಖಲೆ ಬೇಕಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ತಕಾವಿ ಸಾಲ ಮಂಜೂರು ಮಾಡುವುದರಲ್ಲಿ ಸರ್ಕಾರದಿಂದ ಒಂದು ಆದೇಶ ಕೊಡಬೇಕು ; ಅದೇನೆಂದರೆ, ಸಾಲ ಕೊಡುವಾಗ ಪ್ರಯಾರಿಟಿ ಪ್ರಕಾರ ಕೊಡಬೇಕು ಎಂದು. ಈಗ ಆರೀತಿ ಕೊಡುತ್ತಾ ಇಲ್ಲ, ಹಾಗೆ ಕೊಟ್ಟರೆ ಬಡಬಗ್ಗರಿಗೆ ಹಣ ಸಿಕ್ಕುತ್ತದೆ. ಅದಕ್ಕೆ ಅಂತಹ ಒಂದು ಸರ್ಕ್ಯುಲರ್ ಹೊರಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆಯೇ ಸರ್ಕ್ಯುಲರ್ ಹೊರಡಿಸಲಾಗಿದೆ. ತಕಾವಿ ಲೋನು ಸಾಮಾನ್ಯವಾಗಿ ಬಡವರಿಗೆ ಯಾರಿಗೆ ಅವಶ್ಯಕತೆ ಇರುತ್ತದೆಯೋ ಅವರಿಗೇ ಪ್ರಯಾರಿಟಿ ಮೇಲೆ ಕೊಡಬೇಕೆನ್ನುವುದೇ ಸರ್ಕಾರದವರ ಉದ್ದೇಶ. ನಾನು ಮೊದಲೇ ಹೇಳಿದ ಹಾಗೆ ತಕಾವಿ ಲೋನು ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಎಂದು ಮೊದಲು ಎರಡು ತರಹ ಲೋನುಗಳು ಇರುತ್ತಾ ಇದ್ದವು. ರೆವಿನ್ಯೂ ಇರಾಖೆಯವರು ಕಷ್ಟ ಬಂದಾಗ, ಕ್ಷಾಮ ಕಾಲದಲ್ಲಿ ಅದನ್ನು ಕೊಡುತ್ತಾ ಇದ್ದರು. ಈಗ ನೂರಾರು ತರಹ ಲೋನುಗಳು ಬಂದಿವೆ. ಆದರೂ ಈ ಲೋನ್‌ಗಾಗಿ ಅವರ ತಾಲ್ಲೂಕಿಗೆ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ 30 ಸಾವಿರ ರೂಪಾಯಿ ಗಳನ್ನು ಬೇಕಾದರೆ 30 ಜನಗಳಿಗೆ ಒಬ್ಬೊಬ್ಬರಿಗೆ ಸಾವಿರ ರೂಪಾಯಿನಂತೆ ಕೊಡಬಹುದು. ಇನ್ನೂ ಅನೇಕರಿಗೆ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ 30 ಜನಕ್ಕೆ ಬದಲಾಗಿ ತಹಸೀಲ್ದಾರರು 50-60 ರೂಪಾಯಿಗಳವರೆಗೂ ಕೊಟ್ಟು 120 ಜನಗಳವರೆಗೂ ತಲುಪುವಂತೆ ಮಾಡಬಹುದು.

ಶ್ರೀ ಸಿದ್ದಯ್ಯ ಕಾಶೀಮಠ.—100 ರೂಪಾಯಿ ಒಳಗೆ ಇರತಕ್ಕ ಸಾಲವನ್ನು ತಾಲ್ಲೂಕು ಕಚೇರಿಯಲ್ಲಿ ಏಲೇ ಮಾಡುವುದಕ್ಕೆ ಬದಲಾಗಿ ಅವರವರ ಹಳ್ಳಿಯಲ್ಲೇ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕು ಹೆಡ್‌ಕ್ವಾರ್ಟರು ಹಳ್ಳಿಗೆ ಬಹಳ ದೂರದಲ್ಲಿ ಇರುವುದಿಲ್ಲ. 10-15 ಮೈಲಿ ದೂರದಲ್ಲಿರುತ್ತದೆ. ಈಗ ಕೊಡುತ್ತಾ ಇರತಕ್ಕ ಪದ್ಧತಿಯಿಂದ ಅಷ್ಟೇನೂ ಕಷ್ಟವಾಗುತ್ತಾ ಇಲ್ಲ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ತಕಾವಿ ಸಾಲ ತೆಗೆದುಕೊಂಡದ್ದನ್ನು ಎತ್ತು, ಗಾಡಿ ಕೊಂಡುಕೊಳ್ಳುವುದಕ್ಕೆ ಉಪಯೋಗಿಸುತ್ತಾರೋ ಅಥವಾ ಬೇರೆ ಯಾವುದಕ್ಕಾದರೂ ಉಪಯೋಗಿಸು ತ್ತಾರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಕಾವಿ ಸಾಲ ಎಂದರೆ ಕ್ಷಾಮ ಕಾಲದಲ್ಲಿ ಅನೇಕ ವಿಧವಾಗಿ ಉಪಯೋಗ ಮಾಡಿಕೊಳ್ಳಲಿಕ್ಕೆ ಬರುತ್ತದೆ. ದನಗಳಿಗೆ ಮೇವಿಗೆ ಅಥವಾ ಬೀಜದ ರಾಗಿ ಕೊಂಡು ಕೊಳ್ಳುವುದಕ್ಕೆ ಉಪಯೋಗ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನೇಕ ಜನ ರೆಕಾರ್ಡ್ ಮಾಡಿಸಿ 30-40 ರೂಪಾಯಿ ಖರ್ಚು ಮಾಡಿ ಕಡೆಗೆ ನಮಗೆ ಸಾಲ ದೊರೆಯುವುದಿಲ್ಲ ಎಂದು ಹೇಳುತ್ತಾರೆ. 40-50 ರೂಪಾಯಿ ಸಾಲ ಪಡೆಯಲು 28-30 ಖರ್ಚಾಗುತ್ತದೆ. ಈ ದೃಷ್ಟಿಯಿಂದ ಹೆಚ್ಚು ಸಾಲ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಅಂತಹ ಅಕ್ರಮ ಆಗದಂತೆ ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವಂತೆ ಇದಕ್ಕೆಲ್ಲಾ ಬಹಳ ದೊಡ್ಡ ದಾಖಲೆ ಬೇಕಾಗುವುದಿಲ್ಲ. ಸಬ್‌ರಿಜಿಸ್ಟ್ರಾರ್‌ರವರ ಆಫೀಸಿಗೆ ಹೋಗಬೇಕಾಗುವುದಿಲ್ಲ. ಎಷ್ಟು ಹಣ ಇದೆಯೋ ಅಷ್ಟನ್ನು ಹಂಚುತ್ತೇವೆ. ಇನ್ನೂ ಹೆಚ್ಚಿಗೆ ಕೊಡಬೇಕಾದರೆ ಒಂದು ಪ್ರಯಾರಿಟಿ ಲಿಸ್ಟ್ ಇಟ್ಟುಕೊಂಡು ಕೊಡುತ್ತಾ ಹೋಗುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಈ ವರ್ಷದ ದುರ್ಭರ ಪರಿಸ್ಥಿತಿಯಲ್ಲಿ ಹುಲ್ಲನ್ನು ಕೊಳ್ಳುವುದಕೆ ಅಥವಾ ಇನ್ನೇನಾದರೂ ಕೊಂಡುಕೊಳ್ಳುವುದಕ್ಕೆ ಅವರಿಗೆ ಕನಿಷ್ಠ ಪಕ್ಷ 500 ರೂಪಾಯಿಗಳವರೆಗಾದರೂ ಒದಗಿಸುವುದಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳನ್ನು ಆಳ ಮಾಡುವುದಕ್ಕೆ ತಕಾವಿ ಲೋನು ಜಾಸ್ತಿ ಕೊಡ ಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ತಿಂಗಳು ಈ ಒಂದು ಡಿಲ್ಲೆಯಲ್ಲ ನುಮಾರು 3-4 ಲಕ್ಷ ರೂಪಾಯಿ ಬಾವಿಗಳನ್ನು ಆಳಮಾಡುವುದಕ್ಕೆ ಕೊಡಲು ಏರ್ಪಾಡು ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗಿರತಕ್ಕ ಮಾರ್ಗದಿಂದ 60-70 ರೂಪಾಯಿ ಖರ್ಚಾಗುತ್ತದೆ ಎಂದು ರಾಜ್ಯದಲ್ಲ ಗದ್ದಲ ಇದೆ. ಇದನ್ನು ನುಲಭವಾಗಿ ಮಾಡುವುದಕ್ಕೆ ಬೇರೆ ಏನಾದರೂ ಮಾರ್ಗವನ್ನು ಸರ್ಕಾರದವರು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಸಾಲ ಬಹಳ ಪೂರ್ವದಿಂದಲೂ ಇದೆ. ಈಗ ಷಾರ್ಟ್ ಟರ್ಮ್ ಲೋನು, ಮಾಡಿಯಂ ಲೋನು ಈ ರೀತಿ ಬೇರೆ ಬೇರೆ ರೀತಿಯ ಸಾಲಗಳನ್ನು ಕೊಡುತ್ತಾ ಇದ್ದಾರೆ. ಸಾಧ್ಯವಾದಷ್ಟು ನುಲಭ ಮಾಡಬೇಕೆಂಬ ಉದ್ದೇಶದಿಂದಲೇ ಅನೇಕ ವಿಧವಾದ ಲೋನುಗಳನ್ನು ಸರ್ಕಾರದವರು ಕೊಡುತ್ತಾ ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಿ. ಡಿ. ಓ., ತಹಸಿಲ್ದಾರರು, ಅಸಿಸ್ಟೆಂಟ್ ಕಮಿಷನರು, ರೆವೆನ್ಯೂ ಇನ್‌ಸ್ಪೆಕ್ಟರು ಮ ಂತಾದವರ ಕೈ ತಟ್ಟಾದು ರೈತನಿಗೆ ಹಣ ಸರಿಯಾಗಿ ತಲುಪಲು ಸಾಧ್ಯವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಮಹಜರಾಗಿ ಹಣವಿಲ್ಲದೆ ತಾಲ್ಲೂಕುಗಳಲ್ಲಿ 200-300 ಅರ್ಜಿಗಳು ಪೆಂಡಿಂಗಿನಲ್ಲಿವೆ. ಎಲ್ಲ ಹಣ ಖರ್ಚಾಗಿಲ್ಲವೆಂಬುದನ್ನು ಇರಾಖೆಗಳಲ್ಲಿ ನೋಡಿ ಬೇಕಾದ ಕಡೆಗೆ ಉಳಿದಿರುವುದನ್ನು ಡೈವರ್ಟ್‌ಮಾಡುತ್ತೇವೆ. ಆದುದರಿಂದ ಸರಿಯಾಗಿ ಬೇಗ ತಲಪುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೊಟ್ಟಿರುವ ಹಣ ಸರಿಯಾಗಿ ಖರ್ಚುಮಾಡದಿರುವ ಅಧಿಕಾರಿಗಳಿಗೆ ಇನ್‌ಕ್ರಿಮೆಂಟ್ ಅಥವಾ ಪ್ರಮೋಷನ್ ನಿಲ್ಲಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೇನಾದರೂ ಇದ್ದರೆ ದೂರು ಬರುತ್ತದೆ. ಈಗ ಸರಿಯಾಗಿ ಖರ್ಚಾಗುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—60-70 ರೂಪಾಯಿಗಳ ಸಾಲ ನುಲಭವಾದ ಮಾರ್ಗದಲ್ಲಿ ದೊರೆಯುವಂತೆ ಯಾವುದಾದರೂ ಮಾರ್ಗವನ್ನು ಸರಕಾರದವರು ಯೋಚನೆಮಾಡುತ್ತಿರುವರೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ಎಲ್ಲವನ್ನೂ ಯೋಚನೆಮಾಡಿಯೇ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಕೊಡುವ ವ್ಯವಸ್ಥೆ ಮಾಡಿರುವುದು. ಇದಕ್ಕಿಂತ ನುಲಭವಾದ ಮಾರ್ಗವಾವುದೋ ತಿಳಿಯದು.